**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ., ಪಿರಿಯಾಪಟ್ಟಣ.</u>**

**<u>ಸಿಸಿ.ಸಂ.1092/2025</u>**

ಪಿರ್ಯಾದುದಾರರು : ರಾಜ್ಯದ ಪರ ಪಿರಿಯಾಪಟ್ಟಣ ಠಾಣಾ ಆರಕ್ಷಕರು
(ಸಹಾಯಕ ಸರ್ಕಾರಿ ಅಭಿಯೋಜಕರವರಿಂದ)

**ವಿರುದ್ಧ**

ಆರೋಪಿಗಳು : **1.** ಸ್ವಾಮಿ,
ಬಿನ್ ಗಿಡ್ಡಪ್ಪ,
ವಯಸ್ಸು 40 ವರ್ಷ,

**2.** ನಾಗ ಉಃ ನಾಗೇಂದ್ರ,
ಬಿನ್ ಗಿಡ್ಡಪ್ಪ,
ವಯಸ್ಸು 34 ವರ್ಷ,

**3.** ರೇಖಾ,
ಕೋಂ ಸ್ವಾಮಿ,
ವಯಸ್ಸು 35 ವರ್ಷ,

**4.** ರಾಧ,
ಕೋಂ ನಾಗೇಂದ್ರ,
ವಯಸ್ಸು 27 ವರ್ಷ,

**5.** ನಿಂಗಮ್ಮ,
ಕೋಂ ಲೇ.ಗಿಡ್ಡಪ್ಪ,
ವಯಸ್ಸು 60 ವರ್ಷ,

ಆರೋಪಿಗಳ ವಾಸಃ
ನಿಲಂಗಾಲ ಗ್ರಾಮ,
ಪಿರಿಯಾಪಟ್ಟಣ ತಾಲ್ಲೂಕು,
ಮೈಸೂರು ಜಿಲ್ಲೆ.

**<u>ದೋಷಾರೋಪಣೆ</u>**

ಶ್ರೀ ಯೋಗೇಶ.ಎಂ.ಆರ್., ಬಿ.ಎ., ಎಲ್.ಎಲ್.ಬಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ., ಪಿರಿಯಾಪಟ್ಟಣ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆ ರಚಿಸಿದ್ದೇನೆಃ-

**ಮೊದಲನೇಯದಾಗಿ,** ದಿನಾಂಕ 04.03.2025 ರಂದು ಮಧ್ಯಾಹ್ನ 2.30 ಗಂಟೆ ಸಮಯದಲ್ಲಿ, ಪಿರಿಯಾಪಟ್ಟಣ ಪೊಲೀಸ್ ಠಾಣಾ ಸರಹದ್ದಿನ ನಿಲಂಗಾಲ ಗ್ರಾಮದಲ್ಲಿರುವ ತನ್ನ ವಾಸದ ಮನೆಯ ಮುಂದೆ, ಚಾಸಾ.2 ಜಯಣ್ಣ ರವರು ತಮ್ಮ ಮನೆಯ ಜಗುಲಿ ಕೆಲಸ ಮಾಡುತ್ತಿದ್ದಾಗ, ಆರೋಪಿಗಳು ಏಕೋದ್ದೇಶದಿಂದ ಅಲ್ಲಿಗೆ ಬಂದು, ಚಾಸಾ.2 ಜಯಣ್ಣ ರವರು ಕುಪಿತಗೊಂಡು ಸಾರ್ವಜನಿಕ ಶಾಂತಿ ಮತ್ತು ನೆಮ್ಮದಿಗೆ ಭಂಗವುಂಟು ಮಾಡಲಿ ಎಂಬ ಉದ್ದೇಶದಿಂದ ಅವರನ್ನು ಬೋಳಿಮಗನೇ ನೀನು ಮನೆ ಕಟ್ಟಿರುವ ಜಾಗವು ನಮ್ಮದ್ದು ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿ, ಆ ಮೂಲಕ ಆರೋಪಿಗಳಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.352 ಸಹವಾಚಕ 3(5)ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

**ಎರಡನೇಯದಾಗಿ,** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಗಳಾದ ನೀವು ಏಕೋದ್ದೇಶದಿಂದ ನಿಮ್ಮ ಪೈಕಿ 1 ನೇ ಆರೋಪಿಯಾದ ನೀವು, ನಾವು ಮತ್ತು ನಮ್ಮ ಟ್ರಾಕ್ಟರ್ ತಿರುಗಾಡಲು ತೊಂದರೆ ಕೊಡುವ ಉದ್ದೇಶದಿಂದ ಮನೆ ಮುಂದೆ ಜಗಲಿಯನ್ನೂ ಕಟ್ಟಿಸುತ್ತೀದ್ದೀಯಾ ಎಂದು ಚಾಸಾ.2 ಜಯಣ್ಣ ರವರನ್ನು ತಬ್ಬಿಹಿಡಿದುಕೊಂಡು ಮುಂದೆ ಹೋಗದಂತೆ ತಡೆದು, ಅಕ್ರಮ ತಡೆವುಂಟು ಮಾಡಿ, ಆ ಮೂಲಕ ಆರೋಪಿಗಳಾದ ನೀವು

ಭಾರತೀಯ ನ್ಯಾಯ ಸಂಹಿತೆ ಕಲಂ.126(2) ಸಹವಾಚಕ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

**ಮೂರನೇಯದಾಗಿ,** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಗಳಾದ ನೀವು ಏಕೋದ್ದೇಶದಿಂದ ನಿಮ್ಮ ಪೈಕಿ 2 ನೇ ಆರೋಪಿಯಾದ ನೀವು ಒಂದು ದೊಣ್ಣೆಯಿಂದ ಚಾಸಾ.2 ಜಯಣ್ಣ ರವರ ತಲೆಯ ಹಿಂಭಾಗಕ್ಕೆ, ಬೆನ್ನಿಗೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತ ಗಾಯವನ್ನುಂಟು ಮಾಡಿ, ಆ ಮೂಲಕ ಆರೋಪಿಗಳಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.118(1) ಸಹವಾಚಕ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

**ನಾಲ್ಕನೇಯದಾಗಿ,** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಗಳಾದ ನೀವು ಏಕೋದ್ದೇಶದಿಂದ ನಿಮ್ಮ ಪೈಕಿ 3 ರಿಂದ 5 ನೇ ಆರೋಪಿಗಳಾದ ನೀವು ನಿಮ್ಮ ಕೈಗಳಿಂದ ಚಾಸಾ.2 ಜಯಣ್ಣ ರವರ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ಆ ಮೂಲಕ ಆರೋಪಿಗಳಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.115(2) ಸಹವಾಚಕ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

**ಕೊನೇಯದಾಗಿ,** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ.2 ಜಯಣ್ಣ ರವರಿಗೆ ಕೊಲೆ ಮಾಡುವುದಾಗಿ ಪ್ರಾಣಾ ಬೆದರಿಕೆ ಹಾಕಿ, ಆ ಮೂಲಕ ಆರೋಪಿಗಳಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.351(2) ಸಹವಾಚಕ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

ಈ ಮೇಲ್ಕಂಡ ದೋಷಾರೋಪಣೆಗೆ ನೀವು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸಿದ್ದೇನೆ.

ದಿನಾಂಕ:-
ಪಿರಿಯಾಪಟ್ಟಣ.

**(ಯೋಗೇಶ.ಎಂ.ಆರ್.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿ.,
ಪಿರಿಯಾಪಟ್ಟಣ.